# ಆಹಾ ಸುದ್ದಿ!

★ ಸಸಿತೋಟ



ಈತ ಫ್ರೆಂಚ್ ಕಲಾವಿದ ಅಬ್ರಹಾಂ. 10 ಕೋಳಿ ಮೊಟ್ಟೆಗಳಿಗೆ ತಾನೇ ಕಾವು ಕೊಟ್ಟು ಮರಿ ಮಾಡಲು ಹೊರಟಿದ್ದಾನೆ. ದಪ್ಪ ರಗ್ಗನ್ನು ಹೊದ್ದುಕೊಂಡು, ದೇಹದ ಉಷ್ಣತೆ ಹೆಚ್ಚಿಸುವಂತಹ ಶುಂಠಿ ಮೊದಲಾದ ಪದಾರ್ಥಗಳನ್ನು ತಿನ್ನುತ್ತಿದ್ದಾನಂತೆ. ದಿನಕ್ಕೆ ಅರ್ಧ ಗಂಟೆ ಮಾತ್ರ ಕಾವು ಕೊಡುವುದರಿಂದ ಈತನಿಗೆ ಬಿಡುವು. ಮನುಷ್ಯ ತನ್ನ ಈ ಹಕ್ಕನ್ನೂ ಕಸಿದುಕೊಂಡಿದ್ದಾನೆ ಎಂದು ಕೋಳಿಗಳು ಪ್ರತಿಭಟನೆಗೆ ತಯಾರಿ ನಡೆಸುತ್ತಿರಬಹುದು.

ಅಮೆರಿಕದಲ್ಲಿ ಇತ್ತೀಚೆಗೆ ಅತ್ಯಂತ ಕೆಟ್ಟ ವಾಸನೆಯ ಶೂ ಆಯ್ಕೆಗೆ ಸ್ಪರ್ಧೆ ನಡೆಯಿತಂತೆ. 7 ಮಂದಿ ಫೈನಲ್ ಪ್ರವೇಶಿಸಿ ಸ್ಲೊಕೊಂಬ್ ಎಂಬಾತ ಎರಡೂವರೆ ಸಾವಿರ ಡಾಲರ್ ಬಹುಮಾನ ಗಳಿಸಿದನಂತೆ. ಕಾಲುಚೀಲ ಧರಿಸದೆ ಶೂ ಮಾತ್ರ ಹಾಕಿಕೊಂಡು ಓಡಾಡುವುದು, ತನ್ನ ಚಿಕ್ಕಮ್ಮನ ಫಾರ್ಮ್‌ನಲ್ಲಿ ಕೆಲಸ ಮಾಡುವಾಗ ಶೂ ಹಾಕಿಕೊಂಡು ಪ್ರಾಣಿಗಳ ಮಲದಲ್ಲಿ ಕಾಲು ತೂರಿಸುವುದು... ಈತ ಪ್ರಶಸ್ತಿ ಗಳಿಸಲು ನೆರವಾದವಂತೆ. ಈತನೇನೋ ಪ್ರಶಸ್ತಿ ಪಡೆದ ಪುಣ್ಯಾತ್ಮ. ಆದರೆ ತೀರ್ಪುಗಾರರ ಪಾಡು..!

ಮದುವೆಗೆ ಯೋಗ್ಯ ಹುಡುಗಿಯನ್ನು ಹುಡುಕಿಕೊಳ್ಳಲು ವಿಫಲನಾದ ಚೀನಾದ ಎಂಜಿನೀಯರ್ ಝೆಂಗ್ ಜಿಯಾಜಿಯಾ ತಾನೇ ರೊಬಾಟ್ ಒಂದನ್ನು ಸೃಷ್ಟಿಸಿ ಮದುವೆಯಾಗಿದ್ದಾನಂತೆ. ಝೆಂಗ್‌ನ ಮನದಾಕೆಯಾಗಿರುವ ಯಿಂಗ್‌ಯಿಂಗ್ ಎಂಬ ಈ ರೊಬಾಟ್ ಈಗ ಮನೆಯಾಕೆಯಾಗಲು ಮನೆಗೆಲಸವನ್ನೂ ಕಲಿಯಲಿದ್ದಾಳಂತೆ. 2030ರ ಹೊತ್ತಿಗೆ ಚೀನಾದಲ್ಲಿ 3 ಕೋಟಿ ಯುವಕರು ಅವಿವಾಹಿತರಾಗಿ ಉಳಿಯಲಿದ್ದಾರಂತೆ. ಜಗಳವಾಡಿ ತವರಿಗೆ ಹೋಗುವುದಾಗಿ ಬೆದರಿಸದ ಈ ಯಿಂಗ್‌ಯಿಂಗ್ ತಂಗಿಯರಿಗೆ ಬೇಡಿಕೆ ಹೆಚ್ಚಬಹುದು.






ಆಸ್ಟ್ರೇಲಿಯಾದ ಸರ್ಕಸ್ ಕಲಾವಿದೆ ಝೋಯ್ ಎಲ್ಲಿಸ್ ತಿರುಗುತ್ತಿರುವ ಫ್ಯಾನ್ ಬ್ಲೇಡ್ ಅನ್ನು ತನ್ನ ನಾಲಿಗೆಯಿಂದಲೇ ನಿಲ್ಲಿಸುತ್ತಾಳಂತೆ. ಈ ರೀತಿ 32 ಬಾರಿ ಸಾಧನೆ ಮಾಡಿರುವ ಆಕೆ ದಾಖಲೆಯನ್ನು ನಿರ್ಮಿಸಿದ್ದಾಳಂತೆ. ಬ್ಲೇಡ್‌ಗಿಂತ ನಾಲಿಗೆ ಹರಿತ ಎಂದು ಯಾವ ಮಹಾನುಭಾವರು ಹೇಳಿದ್ದಾರೋ!



ಇಟಲಿಯ ವಿನ್ಯಾಸಗಾರರು ಅಪ್ಪಟ 24 ಕ್ಯಾರಟ್ ಚಿನ್ನದ ಹೊದಿಕೆಯನ್ನು ರೂಪಿಸಿದ್ದಾರೆ. ಚಿನ್ನದ ಮೋಹ ಮಂಚದಿಂದ ಹಾಸಿಗೆಗೇರಿದೆ.

ಉಚಿತ ಸಿಹಿ ತಿನಿಸು ತಿನ್ನಬೇಕಾ? ಉಪಾಹಾರಗೃಹಕ್ಕೆ ಭೇಟಿ ನೀಡಿ ನಿಮ್ಮ ಮನದನ್ನೆ ಎದುರು ಮದುವೆ ಪ್ರಸ್ತಾಪ ಮಾಡಿ ಎನ್ನುತ್ತಾನೆ ಇದರಲ್ಲಿ ತಜ್ಞನಾದ ಅಮೆರಿಕಾದ ಯುವಕ ಅಲೆಕ್ಸ್ ನಾಗ್ಲೆ. ತನ್ನ ಗೆಳತಿ ಕ್ಯಾಥಿಯನ್ನು ಕರೆದುಕೊಂಡು ಬೇರೆ ಬೇರೆ ಉಪಾಹಾರಗೃಹಗಳಲ್ಲಿ ಈ ರೀತಿ ನಟಿಸಿದನಂತೆ. ಉಪಾಹಾರಗೃಹದವರು 'ವಾವ್' ಎಂದು ಚಪ್ಪಾಳೆ ತಟ್ಟಿ ತಮ್ಮ ಲೆಕ್ಕದಲ್ಲಿ ಉಚಿತ ಸಿಹಿ ತಿನ್ನಿಸಿ ಕಳುಹಿಸಿದರಂತೆ. ಬೇಕಾಗಿದ್ದು ಅಗ್ಗದ ಉಂಗುರ ಮಾತ್ರ.